Mr. DEPUTY SPEAKER.—The question is:

"That Clause 9, as amended, stand part of the Bill"

The motion was adopted.

Clause 9, as amended was added to the Bill.

4-30 P.M.

Clause 10

Mr. DEPUTY SPEAKER.—The question is:

"That Clause 10 stand part of the Bill."

The motion was adopted.

Clause 10 was added to the Bill.

Sri M. C. NARASIMHAN.—I am not moving the amendment to Clause 11.

Clause 11 *and* 12

Mr. DEPUTY SPEAKER.—The question is:

"That Clauses 11 and 12 stand part of the Bill"

The motion was adopted.

Clauses 11 and 12 were added to the Bill.

Clause 1, *Preamble and Short Title.*

Mr. DEPUTY SPEAKER.—The question is:

"That the Clause 1, the Preamble and the Short title stand part of the Bill."

The motion was adopted.

Clause 1, the Premable and the Short Title were added to the Bill.

Motion to pass.

Sri T. SUBRAMANYA.—I beg to move:

"That the City of Bangalore Municipal Corporation (Amendment) Bill, 1961, as amended be passed".

Mr. DEPUTY SPEAKER.—The question is:

"That the City of Bangalore Municipal Corporation (Amendment) Bill, 1961, as amended be passed'

The motion was adopted.

OFFICIAL RESOLUTION *RE*: CONTROL AND RESTRICTION OF RIBBON DEVELOPMENT IN RESPECT OF NATIONAL HIGHWAYS.

Sri H. K. VEERANNA GOWDH.—I beg to move:

"That whereas it is desirable that control and restriction of ribbon development in respect of National Highways, payment of

(Sri H. K. VEERANNA GOWDH)

compensation to persons sustaining damage in consequence of such control and regulation, levy of betterment charges on lands benefiting from the improvement of National Highways and all other consequential and to incidental matters, in so far as these matters are matters with respect to which Parliament has no power to make laws for the States, should be regulated by Parliament by law;

Now, therefore, in pursuance of Clause (1) of Article 252 of the Constitution of India, this Assembly hereby resolves that the matters aforesaid shall be regulated in the State of Mysore by Parliament by law''

Mr. DEPUTY SPAKER.—Resolution moved:

"That whereas it is desirable that control and restriction of ribbon development in respect of National Highways, payment of compensation to persons sustaining damage in consequence of such control and regulation, levy of betterment charges on lands benefiting from the improvement of National Highways and all other consequential and incidental matters, in so far as these matters are matters with respect to which Parliament has no power to make laws for the States, should be regulated by Parliament by law;

Now, therefore, in pursuance of Clause (1) of Article 252 of the Constitution of India, this Assembly hereby resolves that the matters aforesaid shall be regulated in the State of Mysore by Parliament by law."

†ಶ್ರೀ ಹೆಚ್. ಕೆ. ವೀರಣ್ಣಗೌಡ.—ಸ್ವಾಮಿ ಈ ನಿರ್ಣಯದ ಬಗ್ಗೆ ಹೆಚ್ಚು ವಿವರಣೆ ಕೊಡ ಬೇಕಾಗಿಲ್ಲ. ಮುಖ್ಯವಾಗಿ ಇಂಡಿಯಾ ದೇಶದಲ್ಲಿ ಅನೇಕ ಕಡೆ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮಾಡಲಾಗುತ್ತಿದೆ. ಅನೇಕ ಹೆದ್ದಾರಿಗಳನ್ನು ವಿಸ್ತಾರವಾಗಿ ಮಾಡಬೇಕಾಗಿದೆ ಅದಕ್ಕೆ ರಿಬ್ಬನ್ ಡೆವಲಪ್ಮೆಂಟ್ ಎಂದು ಅನ್ನುತ್ತಾರೆ. ಕೆಲವು ಸಂದರ್ಭದಲ್ಲಿ ಖಾಸಗೀ ಜಮೀನು ಇರುವ ಭಾಗದಲ್ಲಿ ವಿಸ್ತರಣೆ ಮಾಡಬೇಕಾಗಿರುತ್ತದೆ, ಕೆಲವು ಕಡೆ ಈಗ ಇರತಕ್ಕ ಹೆದ್ದಾರಿ ಪ್ರದೇಶದ ಪಕ್ಕದಲ್ಲಿ ಜನರು ಆಕ್ರಮಿಸಿಕೊಂಡು ತಮ್ಮ ಜಮೀನು ಎಂದು ಹೇಳುತ್ತ ಮುಂದು ವರಿದು ಬಂದಿದ್ದಾರೆ. ಅಂಥವರನ್ನು ಈಗ ಬಿಡಿಸಬೇಕಾಗುತ್ತದೆ. ಈ ವಿಚಾರದಲ್ಲಿ ಇಂಡಿಯಾ ಸರಕಾರದ ಒಂದು ಕಾನೂನು ಇದೆ ಅದಕ್ಕೆ ಅನುಸಾರವಾಗಿ ಕ್ರಮ ತೆಗೆದುಕೊಳ್ಳ ಬೇಕಾಗಿದೆ. ಈ ಹೆದ್ದಾರಿಗಳು ರಾಜ್ಯಸರ್ಕಾರದ ಪ್ರದೇಶದಲ್ಲಿ ಇರುವುದರಿಂದ ಇದಕ್ಕೆ ಸಂಬಂಧಪಟ್ಟ ರಾಜ್ಯ ಸರ್ಕಾರದ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಡಬೇಕಾಗಿದೆ ಯಾಕೆಂದರೆ ಈ ಹೆದ್ದಾರಿಗಳ ರಚನೆ, ವ್ಯವಸ್ಥೆ ಮೇಲ್ವಿಚಾರಣೆ ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟದಾಗಿದೆ. ಈ ರೀತಿ ಮಾಡ ಬೇಕೆಂದು ಗೊತ್ತಾಯಿತು. ಇದರ ಉದ್ದೇಶ ಇಷ್ಟೇ. ಈ ಹೆದ್ದಾರಿಗಳು ಈ ಕಡೆ ಮತ್ತು ಆಕಡೆ ಸಾಕಷ್ಟು ಮೀನರಾಗಿ ದಾರಿ ಇರಬೇಕು. ಅಲ್ಲಿಯಾರೂ ಪ್ರವೇಶ ಮಾಡಬಾರದು. ಒಂದು ವೇಳೆ ಯಾರಾದರೂ ಪ್ರವೇಶ ಮಾಡಿದ್ದರೆ ಅಂಥವರನ್ನು ಬಿಡಿಸಬೇಕು. ಒಂದು ವೇಳೆ ವಿಸ್ತರಣೆ ಮಾಡಬೇಕಾಗಿರುವಲ್ಲಿ ಖಾಸಗೀ ಜಮೀನು ಆಗಿದ್ದರೆ ಅಂಥ ಜಮೀನು ಮಾಲೀಕರಿಗೆ ಪರಿಹಾರ ಕೊಡಬೇಕೆಂದಿದೆ. ಇಂಥ ಹೆದ್ದಾರಿ ಇರುವ ಕಡೆ ಸ್ವಾಭಾವಿಕವಾಗಿ ಪಕ್ಕದಲ್ಲಿರತಕ್ಕಂಥ ಜಮೀನುಗಳ ಬೆಲೆ ಜಾಸ್ತಿಯಾಗುತ್ತದೆ. ಅನೇಕ ಅನುಕೂಲಗಳು ಜಾಸ್ತಿಯಾಗುತ್ತವೆ.

ಇದಕ್ಕಾಗಿ ಅಕ್ಕಪಕ್ಕದ ಜಮೀನುಗಳ ಮೇಲೆ ಬೆಟರ್‌ಮೆಂಟ್ ಚಾರ್ಜಸ್ ಹೇರಬೇಕಾಗುತ್ತದೆ. ಈ ಎಲ್ಲ ವಿಷಯಗಳನ್ನು ಆಲೋಚನೆ ಮಾಡಿ ಕೇಂದ್ರ ಸರಕಾರದವರು ಒಂದು ಕಾನೂನು ಮಾಡಬೇಕಾಗಿದೆ. ಈ ನಿರ್ಣಯದ ಮೂಲಕ ಅದಕ್ಕೆ ಒಪ್ಪಿಗೆ ಸೂಚಿಸುವದಾಗಿದೆ. ಈ ವಿಚಾರದಲ್ಲಿ ಯಾವ ಭಿನ್ನಾಭಿಪ್ರಾಯಕ್ಕು ಅವಕಾಶವಿಲ್ಲ. ಈ ನಿರ್ಣಯವನ್ನು ಎಲ್ಲರೂ ಅನುಮೋದಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

†Sri J. B. MALLARADHYA.—Sir, I have given my very best atsention and thought to this matter and I find there are very serious implications involved in this official Resolution. Nobody objects to the principle of national highways being broadened and made more fit for traffic. I have my own ideas about the existing state of affairs so far as the road-sides, or what is technical called "ribbon development" is concerned. In rainy season there is considerable difficulty for vehicles to pass through these highways. What they do is they simply bring earth and put it on the sides or margin. But my objection to the fact is that the ryots whose lands are situated in the margin are to pay betterment levy, as a result of this Resolution enabling the Central Goevrnment and through them the State Government, to take up the works and if the value of lands thereby increase. I cannot understand how there could be enhancement of value of the land simply because it comes within the purview of the national highways.

Sri H. K. VEERANNA GOWDH.—Not only value, there are other facilities also.

Sri J. B. MALLARADHYA.—By merely lengthening the road margin, what are the special facilities that the agriculturists would get. If it is a question of the Government acquiring the land, they are bound to pay compensation under the Act. Under the existing act, the ryots have understood that only up to a certain margin agricultural operations should not take place. Now by this measure, Government would be enabled to go beyond that limit. If the ryots knew that such marginal lands would be eaten up by widening national highways, they would not have carried on agricultural operations in those areas. The lands to be affected are large. I cannot understand whether in the name of fairness Government can tax such people with betterment levy when they are not even paying compensation for taking away land. If it is the intention of the Government to introduce a scheme of national highways in national interest, it is good but betterment levy is contemplated only if a major irrigation project comes into being and thereby the value of the land gets enhanced. I will have to look into the report of the Taxation Enqiry Committee if such betterment levy is justified by law and if it comes within the purview of law.

The Minister has invoked the provisions of Article 252.

The national highway runs within the limits of the State. What prevents you from acquiring the land by the State Government itself. Why should you invoke the provisions of Article 252 of the Constitution and why should you ask the Parliament to enact a law for what your

(Sri J. B. Mallaradhya)

ordinarily do ? If it is a matter beyond your competence or beyond your jurisdiction, I can understand your going to Parliament and saying that you will have no power even to make a law and that will abide by the law you make. But what prevents you from acquiring the land ? The claims of hundreds and thousands of ryots whose lands come within the purview or the State, will have to be settled. If the amount is not available, you can ask the Central Government to make a contribution towards the additional expenditure. I cannot exactly understand why this resolution is necessary. I have not been able to convince myself and unless the Minister makes it clear, I am afraid from the point of view of the ryots and agriculturists, the m asure is not going to be easily acceptable. I would like to have a clarification abefore I can give my definite pinion about this matter.

†ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸ್ವಾಮಿ, ರಾಷ್ಟ್ರೀಯ ಹೆದ್ದಾರಿಗಳು ಅಭಿವೃದ್ಧಿಯಾದರೇನೋ ಒಳ್ಳೆಯದೆ ಆದರೆ ಇದರಿಂದ ರೈತರಿಗೆ ಆಗತಕ್ಕ ಅನುಕೂಲವಾದರು ಏನು ? ರೈತರಿಗೆ ಸೇರಿರತಕ್ಕ ಜಮೀನನ್ನು ಸರ್ಕಾರ ವಶಪಡಿಸಿಕೊಂಡರೆ ಅದಕ್ಕೆ ಸೂಕ್ತ ಪರಿಹಾರ ದ್ರವ್ಯವನ್ನು ಕೊಟ್ಟೇಕೊಡಬೇಕು. ಆದರೆ ಇಲ್ಲಿ ಹೆದ್ದಾರಿಗಳನ್ನು ಉತ್ತಮ ಪಡಿಸುವುದೆಂದರೇನು ? ಇವುಗಳನ್ನೇನು ಬರಿ ಮಣ್ಣು ರಸ್ತೆಗಳಾಗಿ ಮಾಡುತ್ತಾರೆಯೇ, ಕಾನ್‌ಕ್ರೀಟ್ ರಸ್ತೆ ಮಾಡುತ್ತಾರೆಯೇ, ಅಥವಾ ರಸ್ತೇನ ಅಸ್ಫಾಲ್ಟ್ ಮಾಡುತ್ತಾರೆಯೇ ಏನು ಎಂಬುದನ್ನೇ ಇಲ್ಲಿ ತಿಳಿಸಿಲ್ಲ. ಸುಮ್ಮನೆ ಹೆದ್ದಾರಿಗಳನ್ನು ಅಭಿವೃದ್ಧಿ ಮಾಡುತ್ತೇನೆಂದರೆ ಇದು ಅರ್ಥವಿಲ್ಲದ ಮಾತು. ಮೇಲಾಗಿ ರೈತನಿಗೆ ಈ ಹೆದ್ದಾರಿಗಳ ಅಭಿವೃದ್ಧಿಯಿಂದ ಪ್ರತಿಫಲ ಜಾಸ್ತಿಯಾಗುತ್ತದೆಂತ ಹೇಳುವುದು ಇನ್ನು ಅರ್ಥವಿಲ್ಲದ ಮಾತು. ಒಂದು ವೇಳೆ ಈ ಹೆದ್ದಾರಿಗಳು ಅಭಿವೃದ್ಧಿಯಾದರೆ ಆ ಹೆದ್ದಾರಿ ಪಕ್ಕದಲ್ಲಿ ಒಬ್ಬ ರೈತನ ಜಮೀನಿದ್ದರೆ ಅಲ್ಲಿ 4 ಪಲ್ಲ ಬೆಳೆಯುತ್ತಿದ್ದದ್ದು ಹೋಗಿ ಏಕ್‌ದಂ 8 ಪಲ್ಲ ಬೆಳೆ ಬೆಳೆಯುತ್ತದೇನು ? ಅಂಥ ಅವಕಾಶವೇ ಇಲ್ಲದಿರುವಾಗ ಹೀಗೆಲ್ಲ ಹೇಳುವುದು ಅರ್ಥವಿಲ್ಲದ ಮಾತು. ಇದಕ್ಕೆ ಬದಲಾಗಿ ರೈತನ ಜಮೀನಿಗೆ ದಾರಿ ಇಲ್ಲದೆ ಇದ್ದಕಡೆ ಟ್ರಾಕ್ಟರ್—ರಾರಿ ಇತ್ಯಾದಿ ಮೆಷನರಿಗಳು ಒಡಾಡಲು ಅವಕಾಶವಾಗತಕ್ಕ ರಸ್ತೆಗಳನ್ನಾದರೂ ಮಾಡಿದರೆ ಆಗ ಅವುಗಳಿಂದ ಆ ಜಮೀನುಗಳ ಬೆಲೆ ಅಧಿಕವಾಗುತ್ತದೆಂತ ಹೇಳಿದರೆ ಅದರಲ್ಲಿ ಸ್ವಲ್ಪ ತಿರುಳಿದೆ ಅಂಥ ಸಂಧರ್ಭಗಳಿದ್ದರೆ ಆಗ ಆ ರೈತರ ಮೇಲೆ ಸರ್ಕಾರ ಒಂದು ತೆರಿಗೆ ಹಾಕಿದರೂ ಹಾಕಬಹುದು. ಅಂಥ ಅನುಕೂಲಗಳೊಂದು ಇಲ್ಲದೆ ಏಕಾ ಏಕಿ ಪುಸ್ತಕದಲ್ಲಿ ಹೀಗೊಂದು ಬರಪಣಿಗೆ ಮಾಡಿ ರೈತರ ಮೇಲೆ ತೆರಿಗೆ ಹಾಕತಕ್ಕದ್ದು ಸರ್ವಥಾ ನ್ಯಾಯವಾದುದಲ್ಲ. ಇನ್ನೂ ಹೇಳಬೇಕೆಂದರೆ ಈ ಹೆದ್ದಾರಿಗಳ ಬಡಾವಣೆಯಿಂದ ರೈತನ ಸಾಗುವಳಿ ಜಮೀನು ಇಬ್ಭಾಗವಾಗಿ ವ್ಯವಸಾಯಕ್ಕೆ ಅನಾನುಕೂಲಪಡಿಸತಕ್ಕಂಥ ಸಂದರ್ಭಗಳಿರುತ್ತವೆ. ರಸ್ತೆ ಅಗಲ ಪಾದಷ್ಟು ಟ್ರಾಫಿಕ್ ಜಾಸ್ತಿಯಾಗಿ ಅವರ ದನಕರುಗಳು, ಹುಡುಗರು ತಿರುಗಾಡಲು ತೊಂದರೆ ಜಾಸ್ತಿಯಾಗುತ್ತದೆ. ಈಗಾಗಲೇ ಆಕ್ಸಿಡೆಂಟುಗಳು ವಿಪರೀತವಾಗುತ್ತಿವೆ. ಆದರೆ ಈ ವಿಷಯ ಇಂಥ ಒಂದು ಸ್ಪೆಷಲ್ ರೆಸಲ್ಯೂಷನ್ನನ್ನು ನಮ್ಮ ಮುಂದೆ ತರಬೇಕಾದರೆ ಆ ಕೇಂದ್ರ ಸರ್ಕಾರದಿಂದ ನಮ್ಮ ರಾಜ್ಯ ಸರ್ಕಾರಕ್ಕೆ ಒಂದು ರೆಸಲ್ಯೂಷನ್ ಮಂಡಿಸಬೇಕೆಂದು ಆದೇಶವೇನಾದರೂ ಬಂದಿತ್ತೆ ಅಥವಾ ನಮ್ಮ ರಾಜ್ಯ ಸರ್ಕಾರದವರೇ ಈ ರೀತಿ ಉದ್ದೇಶಪಟ್ಟು ಇದನ್ನು ತಂದಿದ್ದಾರೆಯೇ ಎಂಬುದು ನನಗೀಗ ಗೊತ್ತಾಗುತ್ತಿಲ್ಲ. ಈ ವಿಷಯ ಹೀಗೆ ಏಕಾಏಕಿ ರೈತನ ಮೇಲೆ ಈ ತೆರಿಗೆ ಹಾಕತಕ್ಕದ್ದು ನ್ಯಾಯವಲ್ಲ. ಈ ಹಿಂದೆ ಇದೇ ಶ್ರೀಮಾನ್ ವೀರಣ್ಣಗೌಡರು "ನಾನು ರೈತನ ಪ್ರತಿನಿಧಿ" ಎಂತ ಹೇಳಿಕೊಂಡು ಅಗ್ರಿಕಲ್‌ಚರಲ್

ಇಕಂ ಟ್ಯಾಕ್ಸನ್ನು ಹಾರಿಗೆ ತರಬೇಕಾಗಿದ್ದುದ್ದನ್ನು ಕಡೆದು ಹಿಂಡಕ್ಕಿಜ್ಜುರು. ಅಂಥಹರೆ ಈ ದಿವನ ಹೀಗೆ ಅರ್ಥವಿಲ್ಲದ ತೆರಿಗೆಯನ್ನು ರೈತರ ಮೇಲೆ ಹಾಕಲು ಒಪ್ಪಿದರೋ ನಾನು ಬೇರೆ ಕಾಣೆ. ಈ ತೆರಿಗೆ ಹಾಕುವುದರ ಜೊತೆಗೆ ರೈತ ಬೆಳಸಿರುವ ಲಕ್ಷಾಂತರ ರೂ.ಗಳ ಬೆಲೆ ಬಾಳುವ ಮರಗಳನ್ನು ಬೇರೆ ಸರ್ಕಾರದವರು ತೆಗೆದುಕೊಳ್ಳುತ್ತಾರೆ. ಇದರಲ್ಲಿರುವ ಇಂಥ ಅನ್ಯಾಯ ಉಹೆಗೂ ಸಹ ಸಿಲುಕುವುದಿಲ್ಲ. ಈ ದಿವನ ಸರ್ಕಾರದವರು ಈ ಹೆದ್ದಾರಿಗಳ ಬಡಾವಣೆ ಮಾಡಬೇಕೆಂಬ ಯೋಚನೆ ಏಕೆ ಮಾಡಿದ್ದಾರೆಂದರೆ ಯಾವ ಯಾವ ರಸ್ತೆಯಲ್ಲ ಎಷ್ಟೆಷ್ಟು ವಾಹನಗಳು ಸಂಚಾರ ಮಾಡುತ್ತವೆ ಎನ್ನುವ ಆಧಾರದ ಮೇಲೆ ಮಾಡುತ್ತಿದ್ದಾರೆಯೇ ಏನಾ ರೈತನ ಜಮೀನಿನಲ್ಲಿ ಬೆಳೆಯನ್ನೇನೂ ಹೆಚ್ಚಿಸುವುದಕ್ಕಲ್ಲ. ಆದ್ದರಿಂದ ಈ ಹೆದ್ದಾರಿಗಳ ಅಭಿವೃದ್ಧಿ ರೈತನ ಏಳಿಗೆಗಲ್ಲ ಅಭಿವೃದ್ಧಿಗೂ ಅಲ್ಲ ಇದರಿಂದ ರೈತನಿಗೆ ಉಪಕಾರವೂ ಇಲ್ಲ. ಈ ನಿರ್ಣಯ ಪಾಸಾದರೆ ಏನಾ ಕಾರಣ ಬಡ ರೈತನ ರಕ್ತ ಹೀರಲು ಕಾರಣವಾಗುತ್ತದೆ. ಇದು ನ್ಯಾಯವಲ್ಲ. ಆದ್ದರಿಂದ ಇದನ್ನು ಪಾಪನ್ನು ತೆಗೆದುಕೊಳ್ಳಬೇಕೆಂದು ಹೇಳಿ ನಾನು ಇದನ್ನು ವಿರೋಧಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ಸಭೆಯು ತನ್ನ ಕಾರ್ಯಕ್ರಮಗಳನ್ನು ಮುಗಿಸುತ್ತ ಕೊನೆ ಕೊನೆ ದಿನಗಳಿಗೆ ಬಂದ ಹಾಗೆಲ್ಲ ಈ ಸರ್ಕಾರದ ವಿಚಿತ್ರ ವರ್ತನೆಗಳು ಜಾಸ್ತಿಯಾಗುತ್ತಿಲ್ಲ. ಈ ದಿವನ ರಸ್ತೆ ಪಕ್ಕದಲ್ಲ ರೈತನ ಜಮೀನು ಇದ್ದರೆ ಅದು ಅವನ ತಪ್ಪೆ ? ನನ್ನ ಮನೆ ಪಕ್ಕದಲ್ಲ ಒಂದು ಸಿನೀಮಾ ಇದ್ದರೆ ಅದು ನನ್ನ ತಪ್ಪೇ ? ನನ್ನ ಮನೆ ಪಕ್ಕದಲ್ಲ ಸಿನೀಮಾ ಥಿಯೇಟ್ರಿದೆ ಅದರ ಸಂಗೀತವನ್ನು ನೀನು ಯಾವಾಗಲೂ ಕೇಳುತ್ತಿರ ಬಹುದು ಅದ್ದರಿಂದ ನೀನು ಆ ಎರಡು ಷೋಗಳಲ್ಲೂ ಟಿಕೆಟನ್ನು ಕೊಂಡುಕೊಳ್ಳಬೇಕೆಂದು ಹೇಳಿದಂತಿದೆ ಈ ನಿರ್ಣಯದ ಸಾರಾಂಶ. ಆ ನನ್ನ ಮನೆ ಪಕ್ಕದಲ್ಲರುವ ಸಿನೀಮಾ ಥಿಯೇಟ್ರಿನಲ್ಲ ''ತಾಂಡವ ನೃತ್ಯಹರೇ ಗಜಾನನ'' ಎಂತ ಹಾಡತಕ್ಕ ಸಂಗೀತ ನನ್ನ ಮನೆಯಲ್ಲ ಕುಳಿತ್ತಿದ್ದರೂ ಕೇಳಿಸುತ್ತದೆ ಎಂತ ಹೇಳಿ ಹೇಗೆ ನೀವು ಟಿಕಟ್ ಕೊಂಡುಕೊಳ್ಳಬೇಕೆಂತ ನನಗೆ ನಿರ್ಬಂಧ ಮಾಡುತ್ತಿರೋ ನಾನು ಬೇರೆ ಕಾಣೆ ! ಸಿನೀಮಾ ಥಿಯೇಟ್ರಿನ ಪಕ್ಕದಲ್ಲ ಇದ್ದವರು ಸ್ಪೆಷಲ್ ಟ್ಯಾಕ್ಸ್ ಕೊಡಬೇಕೆಂತ ಕೇಳುವುದೆಷ್ಟು ನ್ಯಾಯವೋ ರಸ್ತೆ ಪಕ್ಕದ ಜಮೀನಿಗೆ ತೆರಿಗೆ ಹಾಕಬೇಕೆಂತ ಹೇಳುವುದು ಅಷ್ಟೆ ನ್ಯಾಯ ! ಈ ದಿವನ ರಸ್ತೆ ಪಕ್ಕದಲ್ಲರುವ ಜಮೀನನ್ನು ರಸ್ತೆ ಬಡಾವಣೆಗೆ ತೆಗೆದುಕೊಂಡರೆ ಅತನಿಗೆ ಏನು ಕಾಂಪನ್‌ಸೇಷನ್ ಕೊಡುತ್ತಾರೆ ? ಬೆಂಗಳೂರಿನಿಂದ ಚಿತ್ರದುರ್ಗದವರೆಗೂ, ಬಳ್ಳಾರಿ—ಬೆಂಗಳೂರು ರಸ್ತೆ ಪಕ್ಕದಲ್ಲ ಎರಡು ಕಡೆಗಳಲ್ಲೂ ದೊಡ್ಡ ಚರಂಡಿ ಹೊಡೆದುಕೊಂಡು ಹೋಗಿ ರೈತರ ಜಮೀನನ್ನು ಅಕ್ರಮಣ ಮಾಡಿಕೊಂಡಿದ್ದಾರಲ್ಲ ಅವರಿಗೇನು ಪರಿಹಾರ ನೀಡಲಾಗಿದೆ ? ಇದರಿಂದ ಈ ದಿವನ ಆ ಜಮೀನು ಮಾಲೀಕರುಗಳಿಗೇನು ಅನುಕೂಲವಾಗಿದೆ ? ಈ ರಸ್ತೆ ಬಡಾವಣೆ ಆದ್ದರಿಂದ ಕಾರು ಮಣ್ಣು—ಮಸಿಗಳಲ್ಲಿ ಓಡಾಡತಕ್ಕ ಜನರಿಗೆ ಅನುಕೂಲವಾಗಿರಬಹುದು. ಈ ದಿವನ ಒಂದು ಕೆರೆ ಕಟ್ಟಿದರೆ ಜಮೀನು ಮಾಲೀಕರಿಂದ ಪಾಟರ್ ರೇಟ್ ತೆಗೆದುಕೊಳ್ಳುತ್ತಾರೆ ಏನೂ ಅಂಥಾ ನೀರಾವರಿ ಸಾಕಾರ್ಯ ಮಾಡದೆ ಹೇಗೆ ತೆರಿಗೆ ಹಾಕುತ್ತೀರಾ ? ನಿಮ್ಮ ಕಾಲದಲ್ಲ ಮಾಡಿದರೆ ನೀವು ಜನಗಳ ಶಾಪಕ್ಕೆ ಗುರಿಯಾಗುತ್ತೀರಿ. ಬೆಂಗಳೂರು—ಮೈಸೂರು ರಸ್ತೆಯನ್ನು ಸೇರಿಸಿದ್ದರೆ ಏನಾಗುತ್ತಿತ್ತು ? ಈ ನಿರ್ಣಯವನ್ನು ತರಲು ಆಗ ನೀವು ಹಿಂದು ಮುಂದು ನೋಡುತ್ತಿದ್ದೀರಿ. ಏಕೆಂದರೆ ನಿಮಗೆ ತಾಕಿದಾಗ ಅದರ ತೊಂದರೆ ಕಷ್ಟ ಗೊತ್ತಾಗುತ್ತಿತ್ತು. ಪಾರ್ಲಮೆಂಟಿಗೆ ಅಧಿಕಾರವಿರಲಿಲ್ಲ. ಅದಕ್ಕೋಸ್ಕರ ಅವರಿಗೆ ಕಾನೂನು ಮಾಡಲು ಅಧಿಕಾರ ಕೊಡಲು ಈ ನಿರ್ಣಯವನ್ನು ಒಪ್ಪಿಕೊಳ್ಳಿ ಎಂದು ಹೇಳುತ್ತಿದ್ದೀರಿ. ಅದರೆ ಇದುವರೆಗೂ ನೀವು ಏನು ಹೇಳುತ್ತಿದ್ದೀರಿ ? ಕೇಂದ್ರದವರು ಎಲ್ಲದರಲ್ಲಿಯೂ ಕೈತ್ತ ಹಾಕಿದ್ದಾರೆ. ಹಾಗೆ ಮಾಡುತ್ತಾರೆ ಹೀಗೆ ಮಾಡುತ್ತಾರೆ ಎಂದು ಹೇಳುತ್ತಿದ್ದೀರಿ. ಅವರಿಗೆ ಕಾನೂನು ಮಾಡಲು ಅಧಿಕಾರವಿಲ್ಲವೆಂದು ಕಾನೂನು ಮಾಡಿ

(ಶ್ರೀ ಪಿ. ಜೆ. ಮುಕ್ಕಣ್ಣಪ್ಪ)

ಎಂದು ಅಶ್ವಾಸನೆ ಕೊಡುತ್ತಿದ್ದೀರಿ. ಇದು ಸರಿಯಲ್ಲ. ಇದನ್ನು ವಾಪಸು ತೆಗೆದುಕೊಳ್ಳಿ. ರಸ್ತೆಗಳ ಪಕ್ಕದಲ್ಲಿ ಹೊಲ, ಗದ್ದೆ, ಸ್ವೆಟುಗಳು ಮಗ್ಗೆರೆ ಮಾಡಿಕೊಂಡಿರುವುದರಿಂದ betterment levy ಮಾಡಬೇಕೆಂದು ಹೇಳುತ್ತೀರಿ. ಇದು ಸರಿಯಲ್ಲ. ಈ ನಿರ್ಣಯವನ್ನು ಸ್ವಲ್ಪ ಕಾಲವೆಂದರೆ 1962ನೆಯ ಇಸವಿ ಮಾರ್ಚ್ 31ನೆಯ ತಾರೀಖಿನವರೆಗೆ ಒತ್ತಾಯ ಮಾಡಬೇಡಿ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು, ದೇವರು ತಮಗೆ ಒಳ್ಳೆಯ ಬುದ್ಧಿಯನ್ನು ಕೊಡಲಿ ಎಂದು ಕೇಳಿ ಕೊಳ್ಳುತ್ತೇನೆ.

†Sri M. C. NARASIMHAN.—Sir, the real trouble arises in regard to betterment charges. We do not know on what basis the betterment charges are sought to be levied by the new law by the Centre. Sir, yesterday we passed a law in respect of town and country planning and in that the betterment charge was not to be more than 1/3 of the increament of the market value of the land. But, here, we do not know what the basis would be. Sir, there are so many national highway passing through the State. Bangalore–Madras and Bangalore–Bombay are national highways. In respect of these existing national highways, is it the intention of the Government or the parliament. by law, to impose any betterment charge ? If that be so, it is patently an error because so far as taxation measure like a betterment charge is concerned, it can never be with retrospective effect. You must give notice to the public. So, this may arise only in the case of highways which will be taken up later on, after the parliament enacts this law. It is very clear that you cannot bring this Act into fo.ce with any restrospective effect. If that be so, I wonder which are the national highways which are likely to come in this. So far as I can see national highways are determined by the Government of India and the State Government will not have any voice in the matter. After passing this resolution, we have nothing more. Sir, at least have the State Government of India to the effect that on the draft bill they will be consulted and their view point would be accommodated ? If that is so, there is some meaning. I wish the Hon'ble Minister makes it clear that he will secure such an assurance from the Government of India.

†ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಾಮಿ, ನಾನು ಬಹುತಃ ಉದ್ದಾದ ಭಾಷಣ ಮಾಡಬೇಕಾಗಿತ್ತು ಎಂದು ಈಗ ನನಗನಿಸುತ್ತದೆ. ಇದಕ್ಕೆ ಅಂಥ ದೊಡ್ಡ ವಿವರಣೇ ಏನೂ ಅಗತ್ಯವಿಲ್ಲವೆನ್ನುವ ದೃಷ್ಟಿಯಿಂದ ಸ್ವಲ್ಪದರಲ್ಲಿಯೇ ಹೇಳೋಣ, ಇವರೆಲ್ಲ ಸೂಕ್ಷ್ಮ ಬುದ್ಧಿಯುಳ್ಳವರು, ಬೇಗ ಗ್ರಹಿಸಿ ಕೊಳ್ಳುತ್ತಾರೆ ಎನ್ನುವ ಮನೋಭಾವ ನನಗೆ ಇತ್ತು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಮಗೆ ಹೊಳೆದಿಲ್ಲ, ದಯವಿಟ್ಟು ಹೇಳಿ.

ಶ್ರೀ ಎಚ್. ಕೆ. ವೀರಣ್ಣಗೌಡ.—ಬೆರಳು ತೋರಿಸಿದರೆ ಅಂಗೈ ನುಂಗುವಂತ ಜನ ಅಮರು.....

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ನಾವು ಅಂಗೈ ನುಂಗುವವರು, ತಾವು ದೇಶ ನುಂಗುವವರು.

ಶ್ರೀ ಎಚ್. ಕೆ. ವೀರಣ್ಣಗೌಡ.—ಈ ನಿರ್ಣಯದ ಮೇಲೆ ಎರಡು ಮೂರು ಅಕ್ಷೇಪಣೆಗಳು ಬಂದಿವೆ. ಅವುಗಳಲ್ಲಿ betterment levy ವಿಷಯ ಬಹಳ ಪ್ರಾಮುಖ್ಯವಾಗಿ ಬಂದಿದೆ. ಶ್ರೀ ನರಸಿಂಹನವರು ಮಾತನಾಡುವಾಗ national highways determine ಮಾಡಲು ನಮಗೆ ಸ್ವಲ್ಪವೂ ಅಧಿಕಾರವಿಲ್ಲವೆಂದೂ, ಎತ್ತು ಹಾರುವುದಕ್ಕೆ ಮುಂಚೆ ಗೋಣಿ ಹಾರಿತು ಎನ್ನುವಂತೆ ಇಂಡಿಯಾ ಸರ್ಕಾರದವರನ್ನು ನೀವೆ ಪುನರಾಯಿಸಿ ಇಂಥ ಕಾನೂನನ್ನು ಮಾಡಿ ಎಂದು ಹೇಳುತ್ತೀರಿ ಎನ್ನುವ ಅರ್ಥ ಬರುವಂತೆಯೂ ಹೇಳಿದರು. ಅದು ನಿಜವಲ್ಲ. ಈ ವಿಷಯ ಇವತ್ತಿನದಲ್ಲ. ಸ್ವರಾಜ್ಯ ಬಂದ ಮೇಲೆ ದೇಶದ ಅಭಿವೃದ್ಧಿ ನಾನಾಮುಖವಾಗಿ ಬೆಳೆಯಲು ಪ್ಲಾನಿಂಗ್ ಕಮಿಷನ್ ಸಲಹೆ ಮಾಡಿರುವುದು ತಮಗೆಲ್ಲ ಗೊತ್ತಿದೆ. ಹಾಗೆಯೇ national highways committee ಇದೆ. 1956ನೆಯ ಇಸವಿಯಷ್ಟು ಹಿಂದಿನ ಕಾಲದಲ್ಲಿಯೇ national highways ಹೊಸದಾಗಿ ಮಾಡಬೇಕು ಮತ್ತು ಹಳೆಯುವನ್ನು ಅಭಿವೃದ್ಧಿ ಮಾಡಬೇಕಾಗುತ್ತದೆಂದು ಹೇಳಿದರು, ಹಾಗೆ ರಸ್ತೆಗಳನ್ನು ಅಭಿವೃದ್ಧಿ ಮಾಡುವಾಗ, ಜನಗಳ ಜಮೀನನ್ನು ತೆಗೆದುಕೊಳ್ಳಬೇಕು ಅಂಥ ಜಮೀನನ್ನು ಅಕ್ವೈರ್ ಮಾಡಿಕೊಂಡು ಕಾಂಪೆನ್ಸೇಷನ್ ಕೊಡಬೇಕು. ಇದೆಲ್ಲ ರಸ್ತೆಯ ಪಕ್ಕದಲ್ಲಿ tea shops ಅನೇಕ ಕಡೆ ಇರುತ್ತವೆ. ನಮ್ಮ ದೇಶದಲ್ಲಿ ಮತ್ತು ಬೇರೆ ದೇಶಗಳಲ್ಲಿ ಅತಿ ಕ್ರಮವಾಗಿ sheds ಮಗೈರೆ ಹಾಕಿ ಕೊಂಡಿರುತ್ತಾರೆ. ಬಡವರು ಬದುಕಿಕೊಳ್ಳಲು ಎಂದು ನಮ್ಮನೆ ಬಿಟ್ಟಿರುತ್ತೇವೆ. ಅಂಥವರನ್ನು ಕಳಿಸುವುದಕ್ಕೆ ಅಧಿಕಾರಬೇಕು. ಕೆಲವು ಸಂದರ್ಭಗಳಲ್ಲಿ ದೊಡ್ಡ ದೊಡ್ಡ advertisement boards ಹಾಕಿರುತ್ತಾರೆ. ಇವನ್ನು ತೆಗೆದು ಹಾಕಬೇಕಾದರೆ specific ಆಗಿ ಅಧಿಕಾರವಿರುವದಿಲ್ಲ. ದೊಡ್ಡ ದೊಡ್ಡ ಬೋರ್ಡ್‌ಗಳನ್ನು ಹಾಕಿದರೆ, ಕಂಬಗಳನ್ನು ನಿಲ್ಲಿಸಿ ಅಡ್ವರ್ಟೈಸ್ ಮಾಡಿರುವುದನ್ನು ತಾವೆಲ್ಲ ನೋಡಿರಬಹುದು. ಅದನ್ನೆಲ್ಲಾ ಹತೋಟಿ ಗೊಳಿಸಬೇಕಾದರೆ ಒಂದು ಕಾನೂನಾಗಬೇಕು. ಎಂದು 1956 ನೇಇಸವಿಯಷ್ಟು ಹಿಂದೆಯೇ ಇಂಡಿಯಾ ಸರ್ಕಾರದ ಮಟ್ಟದಲ್ಲಿ ಪ್ಲಾನಿಂಗ್ ಕಮಿಷನ್ ಮಟ್ಟದಲ್ಲಿ ಪ್ರಸ್ತಾಪವಾಯಿತು.

5-00 P. M.

ಈಗ ಅವರು ಬೇರೆ ಬೇರೆ ಸರ್ಕಾರದವರ ಅಭಿಪ್ರಾಯವನ್ನು ಕೇಳಿದರು. ಬೊಂಬಾಯಿ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಬರೆದರು. ಬೆಟರ್‌ಮೆಂಟ್ ಲೆವಿ ಹಾಕುವುದಕ್ಕೆ ನ್ಯಾಷನರ್ ಹೈವೇಗೆ ಸ್ಟೇಟ್ ಗವರ್ನ್‌ಮೆಂಟಿಗೆ ಅಧಿಕಾರವಿರುವುದು ನನಗೆ ಅರ್ಥವಾಗಲಿಲ್ಲ. ಅದು ಕೇಂದ್ರ ಸರ್ಕಾರದ ಲೇವಲ್ಲಿನಲ್ಲಿ ನಡೆಯಬೇಕು ಎಂದು ಸಲಹೆ ಕೊಟ್ಟರು. ಅವರಿಗೂ 1957 ನೇ ಇಸವಿಯಲ್ಲಿ ಒಂದು ಡ್ರಾಫ್ಟ್ ಬಿಲ್ಲನ್ನು ಕಳುಹಿಸಿದ್ದೇವೆ. ಅವರು ಕಣ್ಣು ಮುಚ್ಚಿಕೊಂಡು ಕಳುಹಿಸಿದ್ದರೂ ನಾವು ಒಪ್ಪಬೇಕು. ಆದರೆ ಅದು ಯಾವ ಕಾರಣದಿಂದಲೊ ನಿಂತು ಹೋದ ಮೇಲೆ ಮತ್ತೆ ಮತ್ತೆ ಕಾಗದ ಬರೆದಿದ್ದೇವೆ. ಅದಕ್ಕೆ ಪ್ರತ್ಯುತ್ತರವಾಗಿ ಬೇರೆ ಎರಡು ಸ್ಟೇಟುಗಳಲ್ಲಿ ಮಾಡಿದ್ದಾರೆ. ನೀವೂ ಸಹ ಜಾಗ್ರತೆ ಮಾಡಬೇಕೆಂದು ನಮಗೆ ಕಾಗದ ಬರೆದಿದ್ದಾರೆ. ಮತ್ತೆ ಡ್ರಾಫ್ಟ್ ಬಿಲ್ಲನ್ನು ಯಾವ ತರಹದಲ್ಲಿ ಮಾಡುತ್ತಿದ್ದೇವೆಂಬುದಕ್ಕೆ ನಮ್ಮಲ್ಲಿ ಒಂದು ಬರ್ ಇದೆ. ಏಕೆಂದರೆ ಈ ಬೆಟರ್‌ಮೆಂಟ್ ಲೆವಿ ಪ್ರಶ್ನೆ ಬಹಳ ದೊಡ್ಡದು. ಏನಾದರೂ ಜಮೀನಿನಲ್ಲಿ ಇರ್ರಿಗೇಷನ್ ಸೌಕರ್ಯಗಳನ್ನು ಮಾಡಿಕೊಟ್ಟರೆ ಮಾತ್ರ ಎಂದು ಅಪವಾದ ಕೊಡಿಸಿದರು. ಆದರೆ ಯಾವುದೂ ಕಾರಣದಿಂದ ಜಮೀನು ಅಭಿವೃದ್ಧಿಗೆ ಬಂದರೆ ಸ್ವಲ್ಪ ಬೆಟರ್‌ಮೆಂಟ್ ಲೆವಿ ಕೊಡಬೇಕೆಂದು ಕೇಳುವುದು ಸಾಧುವಾದುದು ಅಂದ ಹಾಗೆ ಚಿತ್ರದುರ್ಗದ 13ನೇ ಮೈಲಿಯ ನಣ್ಣ ರಸ್ತೆಯಲ್ಲಿ ಗಾಡಿ, ಬೈಸಿಕಲುಗಳು ಓಡಾಡುತ್ತಿದ್ದವು. ಈಗ ಆ ರಸ್ತೆ ನ್ಯಾಷನರ್ ಹೈವೆ ಆದ ಮೇಲೆ ಲಾರೀಸ್ ಮುಂತಾದ ವಾಹನಗಳು ಓಡಾಡುವಾಗ ನಿಜವಾಗಿ ಜಮೀನಿನ ಬೆಲೆ ಅಧಿಕವಾಗುತ್ತದೆ. ನನ್ನ ಸ್ವಂತ ಜಮೀನಿನಲ್ಲಿ ರೂರರ್ ಕಮ್ಯೂನಿಕೇಷನ್ ಯಾವ ರೀತಿ ಮಾಡಿದೆಯೋ ನನಗೆ ಸರಿಯಾಗಿ ಗೊತ್ತಿಲ್ಲ. ಹಿಂದೆ ಮಂಡ್ಯಾ ಷುಗರ್ ಕಂಪೆನಿ ಚೇರ್‌ಮನ್ನರ ಕೈಕೆಳಗೆ 900 ಮೈಲಿ ರಸ್ತೆಗೆ ನ್ಯಾಷನರ್ ಹೈವೇ

(ಶ್ರೀ ಹೆಚ್. ಕೆ. ವೀರಣ್ಣಗಾಡ)

ಮಾಡುವ ಅವಕಾಶವಿತ್ತು. ಅಂತಹ ಕಡೆಯಲ್ಲಿ ಗೊಬ್ಬರ, ಬತ್ತ, ಹುಲ್ಲು ಸಾಗಿಸುವುದೇ ಕಷ್ಟವಾಗಿತ್ತು. ಈಗ ಷುಗರ್ ಕಂಪೆನಿಯಿಂದ ನ್ಯಾಷನರ್ ಹೈವೆ ಆದ ಮೇಲೆ ಮತ್ತು ಷುಗರ್‌ಗೆ ಸೆಸ್ ಕರೆಕ್ಟ್ ಮಾಡಿದ ಮೇಲೆ ಒಂದೊಂದು ಜಮೀನಿನ 200–300 ರೂಪಾಯಿಗಳನ್ನು ಕಂಡಿತು. ಡೈರೆಕ್ಟ್‌ಆಗಿ ಈಗ ನ್ಯಾಷನರ್ ಹೈವೇ ತೆಗೆದು ಕೊಂಡು ಹೋಗ ಬೇಕಾಗಿದೆ. ಇಂಥಾದ್ದನ್ನು ಒಂದು ಗಾಡಿ ದಾರಿಯಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವೇ ? ಇದನ್ನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಇದರ ಬೆಲೆ ನಿಜವಾಗಿ ಡಾಸ್ಟ್ರಿಯಾಗುತ್ತದೆ. ಹೀಗೆ ಜನಗಳ ನಂಬಾದವೆಯಲ್ಲಿ ಸ್ವಲ್ಪ ಭಾಗ ಈ ತೆರಿಗೆಗೆ ಹೋಗುತ್ತದೆ. ಆ ತೆರಿಗೆಯನ್ನು ವಸೂಲು ಮಾಡಿಕೊಂಡೇ ಸರ್ಕಾರ ಜನಗಳಿಗೆ ಸಹಾಯ ಮಾಡಿಕೊಡಬೇಕು, ಅದ್ದರಿಂದಲೇ ಜಮೀನು ಬೆಲೆ ನಿಜವಾಗಿ ಹೆಚ್ಚುತ್ತದೆ. ಅದರಿಂದ ಅನಾನೊಕೂಲವೂ ಆಗುತ್ತದೆ. ಬೆಟರ್‌ಮೆಂಟ್ ರೆವಿ ಹಾಕಬೇಕಾದರೆ ಸುಮ್ಮನೆ ಹಾಕುವುದಿಲ್ಲ. ಮೊದಲು ನೋಟಿಸ್ ಕೊಡುತ್ತಾರೆ, ಅವರನ್ನು ಕೇಳುತ್ತಾರೆ. ಅವರದು ಏನಾದರೂ ತಕರಾರು ಇದೆಯೇ ಎಂದು. ತಕರಾರು ಇಲ್ಲದೇ ಇದ್ದರೆ ರೆವಿ ಏಕೆ ಹಾಕಬಾರದು ಎಂದು ಅಲ್ಲಿಯೇ ಅವರ ಅಭಿಪ್ರಾಯವನ್ನು ತೆಗೆದುಕೊಂಡು ಅಮೇಲೆ ತೀರ್ಮಾನ ಮಾಡುತ್ತಾರೆ. ನ್ಯಾಷನರ್ ಹೈವೇ ಇರತಕ್ಕ 10 ಎಕರೆ ಜಮೀನಿಗೆ 20 ರೂಪಾಯಿಗಳವರೆಗೂ ಬೆಟರ್‌ಮೆಂಟ್ ರೆವಿ ಹಾಕುತ್ತಾರೆ. ಅವನ್ನೂ ನಪ ಕಾನೂನುಬದ್ಧವಾಗಿ ಮಾಡಬೇಕು. ಅದಕ್ಕೆ ಸಂಭಂದಪಟ್ಟ ಆಫೀಸರು ವಿಚಾರ ಮಾತಬೇಕು. ಬಿಲ್ಲನಲ್ಲದೆಯೆಂದು ಇಂಡಿಯಾ ಸರ್ಕಾರದ ಅನುಮತಿಯನ್ನು ಪಡೆಯದೆ ಯಾವುದನ್ನೂ ಮಾಡುವುದಕ್ಕೂ ಆಗುವುದಿಲ್ಲ. ಇವತ್ತು ನ್ಯಾಷನರ್ ಹೈವೇ ಮೈಸೂರಿನಲ್ಲಿ ಅಷ್ಟೆ ಹೋಗುವುದಿಲ್ಲ. ದೆಹಲಿಯಿಂದ ಕನ್ಯಾಕುಮಾರಿಯವರೆಯವರೆಗೂ ಬೊಂಬಾಯಿನಿಂದ ಕಲ್ಕತ್ತವರೆಗೂ, ದೆಹಲಿಯಿಂದ ಮದ್ರಾಸ್‌ವರೆಗೂ ನ್ಯಾಷನರ್ ಹೈವೇ ಹಾಕಿ ಅನೇಕ ಸ್ಟೇಟುಗಳಿಗೆ ಹೋಗಬೇಕು. ಅದ್ದರಿಂದ ಇಡೀ ಭಾರತಕ್ಕೆ ಅನ್ವಯಿಸುವಂತಹ ಒಂದು ಕಾನೂನನ್ನು ಈ ಬಗ್ಗೆ ಮಾಡಬೇಕಾದರೆ ಇಂಡಿಯಾ ಸರ್ಕಾರದವರು ಮಾಡಿದರೆ ಅದು ಏಕ ರೂಪವಾಗಿ ಬರುತ್ತದೆ. ಅಂತಹ ಕಾನೂನು ಮಾಡುವುದಕ್ಕೆ ಈ ನ್ಯಾಷನರ್ ಹೈವೇ ಗಳ ಸಲುವಾಗಿ ನೀವು ಇಂಡಿಯಾ ಸರ್ಕಾರದವರು ಮಾಡಬಹುದು ಎಂದು ಒಂದು ನಿರ್ಣಯ ಮೂಲಕ ಅವರಿಗೆ ಅಧಿಕಾರ ಕೊಟ್ಟರೆ ಈ ಡ್ರಾಪ್ಟ್ ಬಿಲ್ಲನ್ನು ಕಳುಹಿಸಬಹುದು. ಈಗಾಗಲೇ ನಾಲ್ಕು ವರ್ಷಗಳು ಕಳೆದು ಹೋಗಿವೆ. ಕಳುಹಿಸಿಬಿಡುವುದಕ್ಕೆ ಮುಂಚಿತವಾಗಿ ಬಹುಶಃ ರಿವೈಜ್ ಮಾಡಬಹುದು. ನಮ್ಮನ್ನೂ ಸಹ ಅವರು ಕನ್ಸಲ್ಟ್ ಮಾಡುತ್ತಾರೆ. ಅವರೇ ಕಾನೂನುಬದ್ಧವಾಗಿ ಮಾಡಬಹುದು ಎಂದು ಎರಡು-ಮೂರು ಸಂಸ್ಥಾನಗಳವರು ಈಗಾಗಲೇ ಒಪ್ಪಿಕೊಂಡಿದ್ದಾರೆ. ನಾವೂ ಸಹ ಈಗ ಒಪ್ಪಿಕೊಂಡರೆ ಮುಂದೆ ಇನ್ನು ಯಾವ್ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದನ್ನು ಒಂದು ನಿರ್ಣಯಮೂಲಕ ತಮ್ಮ ಮುಂದೆ ಇಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಜಿ. ಎಸ್. ಪುಟ್ಟಣ್ಣ(ತುಮಕೂರು).—ನಾವು ಈಗ ಅವರಿಗೆ ಈ ಅಧಿಕಾರ ಕೊಟ್ಟಮೇಲೆ ಅದು ನಮ್ಮ ಕೈಯಿಂದ ಬಿಟ್ಟು ಹೋಗುತ್ತದೆ. ಈಗ ಇನ್ನೂ ಅಕ್ಸಿಸಿಷ್ಟ್ ಆಗಬೇಕು. ಬೆಟರ್‌ಮೆಂಟ್ ರೆವಿ ಹಾಕಿದ್ದು ನಮ್ಮ ಟ್ರೆಜರಿಗೆ ಬರುತ್ತದೋ ಇಲ್ಲವೊ ಗೊತ್ತಿಲ್ಲ. ಯಾವ ತರಹದಲ್ಲಿ ಬರ್ ಡ್ರಾಫ್ಟ್ ಮಾಡಿದ್ದೀರೋ ನಮ್ಮ ಅವರ ಅತಯ ಗೊತ್ತಿಲ್ಲ. ನಾವೊಂದು ತರಹದಲ್ಲಿ ಒಪ್ಪಬಹುದಾಗಿತ್ತು. ದಯವಿಟ್ಟು ಆ ಬಿಲ್ಲನ್ನು ಸರ್ಕ್ಯೂಲೇಟ್‌ಮಾಡಿ ಮುಂದಿನಸಾರಿ ತೆಗೆದುಕೊಂಡು ಬನ್ನಿ. ನಾವೇ ಏಕೆ ಆ ಕೆಲಸ ಮಾಡಬಾರದು.

ಶ್ರೀ ಎಚ್. ಕೆ. ವೀರಣ್ಣಗಾಡ.—ನಾನು ಹೇಳಿದಹಾಗೆ ಇದನ್ನು 1957 ರಿಂದ 1961 ರಲ್ಲಿ ತಂದಿದ್ದಾರೆ. ಈ ವಿಷಯವನ್ನು ಬೇಗ ತಿಳಿಸಬೇಕೆಂದು ಕೇಂದ್ರ ಸರ್ಕಾರದವರು ಕೇಳುತ್ತಿದ್ದಾರೆ

ಎರಡನೆಯದಾಗಿ ಇದನ್ನು ಕೇಂದ್ರ ಸರ್ಕಾರದವರಲ್ಲಿ ಬಿಟ್ಟು ಕೊಟ್ಟರೆ ನಮ್ಮ ಕೈಬಿಟ್ಟು ಕೊಗುತ್ತದಲ್ಲಾ ಎಂಬ ಸಂದೇಹವಿದೆ. ಅವರಿಗೆ ಈ ಒಂದು ಮನೂಜೆಯ ಅಧಿಕಾರವನ್ನು ಕೊಟ್ಟಾಕ್ಷಣಕ್ಕೆ ಅವರು ಬೇರೆ, ನಾವು ಬೇರೆ ಎಂದು ಹೇಳುವುದಕ್ಕಾಗುವುದಿಲ್ಲ, ತಾವು ತಿಳಿದವರು. ಏತಕ್ಕಾಗಿ ಆ ರೀತಿ ಮಾತನಾಡುತ್ತಿದ್ದೀರೋ ನನಗೆ ಅರ್ಥವಾಗಲಲ್ಲ.

ಇನ್ನು ಸಂಸ್ಥಾನದ ಜನಗಳಿಗಿರತಕ್ಕ ಕಷ್ಟ ನುಖಗಳೇನೇನು ಎಂಬುದೂ, ಪ್ಲಾನಿಂಗ್ ಕಮಿಷನ್ನಿನವರು ಏನೇನು ಮಾಡುತ್ತಿದ್ದಾರೆಂಬುದೂ ನಮಗೆ ಗೊತ್ತಿದೆ. ರ್ಯಾಂಡ್ ರಿಫಾರಮ್ಸ್ ಬಗ್ಗೆ ಮೈಸೂರು ಸಂಸ್ಥಾನದ ರೈತರ ಹಿತ ರಕ್ಷಣೆಗೋಸ್ಕರ ಒಂದು ನಿರ್ಣಯವಾಗಿದ್ದರೂ ನಿಜವಾಗಿ ಪ್ಲಾನಿಂಗ್ ಕಮಿಷನ್ನಿನವರು ಒಳ್ಳೆಯದನ್ನೇ ಮಾಡುತ್ತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಎಷ್ಟೋಜನ ರೈತರು ನಮ್ಮ ಜಮೀನು ಕಡೆ ರಸ್ತೆ ಹೋಗುತ್ತದೆ. ಅದಕ್ಕೆ ಅನುಕೂಲವಾಡಿಕೊಡುತ್ತೀರಾ ಎಂದು ಕೇಳುತ್ತಿದ್ದಾರೆ. ಅದೂ ಅಲ್ಲದೆ ಇತ್ತೀಚೆಗೆ ಸರ್ಕಾರದವರು ನಾಲ್ಕು ವರ್ಷಗಳಿಂದಲೂ ಮೂರು ಜನ ಪಿ.ಡಬ್ಲ್ಯು.ಡಿ ಸೆಕ್ರೆಟರಿಗಳನ್ನು ಬದರಾವಣೆಮಾಡುತ್ತಿದ್ದಾರೆ. ಅಂದಮೇಲೆ ಈ ಡ್ರಾಫ್ಟ್ ಅವರೆಲ್ಲರಿಂದಲೂ ಪರಿಶೀಲನೆ ಮಾಡಿದ ನಂತರವೇ ಸರ್ಕಾರದವರು ಇದರಿಂದ ಭಾಧಕವಿಲ್ಲವೆಂಬುದಾಗಿ ಮನದಟ್ಟು ಮಾಡಿಕೊಂಡಿದ್ದಾರೆ. ಅದರಂತೆಯೇ ಈಗ ಈ ಡ್ರಾಫ್ಟ್ ಬಿಲ್ಲನ್ನು ತಂದಿದ್ದೇವೆ. ತಮಗೇ ಅದು ಗೊತ್ತಿರಬೇಕು. ನ್ಯಾಷನಲ್ ಹೈವೇಸಿಗೆ ಆಗಿರತಕ್ಕ ಖರ್ಚಿನಲ್ಲಿ ನಮಗೊಂದು ರಿಪೇರಿಗೆ ಮೂರು ಸಾವಿರ ರೂಪಾಯಿಗಳು ಅದರೆ ಅದರ ಮೇಂಟನೆನ್ಸ್ ಅವರದೇ-ಅದರೆ ಎಲ್ಲಾಕಡೆಯೂ ಆ ರೀತಿ ಆಗುವುದಿಲ್ಲ. ರಾಯರುಗಳನ್ನೋ ಅಥವಾ ಅವರ ರೆಪ್ರಸೆಂಟೆಟಿವ್‌ಗಳನ್ನೋ ಕೇಳಿಕೊಂಡು ಆ ಮೇರೆ ತೀರ್ಮಾನಮಾಡುತ್ತಾರೆ. ಬರತಕ್ಕ ಆದಾಯವೂ ಅಷ್ಟೇ ಇಂಡಿಯಾ ಸರ್ಕಾರಕ್ಕೆ ಅದು ಹೋಗುವುದು ಸ್ವಾಭಾವಿಕವಾಗಿದೆ. ಅವಕ್ಕೆಲ್ಲಾ ಎಕ್ಸ್‌ಪ್ಲನೇಷನ್ ಬೇಕಿಲ್ಲ. ಮೈಸೂರು ಸರ್ಕಾರದ ಪಬ್ಲಿಕ್ ವರ್ಕ್ಸ್ ಇರಾಖೆಯು ಮೂರು ಜನ ಸೆಕ್ರೆಟರಿಗಳು ಈ ಡ್ರಾಫ್ಟ್ ಬಿಲ್ಲನ್ನು ಅವರವರ ಕಾಲದಲ್ಲಿ ಪರಿಶೀಲನೆಮಾಡಿ ಕ್ಯಾಬಿನೆಟ್ಟಿನಲ್ಲಿ ಒಪ್ಪಿಗೆ ಕೊಡಬೇಕು ಎಂದು ತಿಫಾರ್ಸು ಈಗಾಗಲೇ ಆಗಿರುವುದರಿಂದ ಈ ಸರ್ಕಾರಕ್ಕೆ ತಮ್ಮ ಒಪ್ಪಿಗೆಯು ಧೃವಸಯೂ ಇರುವುದರಿಂದ ಈ ನಿರ್ಣಯವನ್ನು ನಾನು ತಮ್ಮ ಮುಂದೆ ಇಟ್ಟಿದ್ದೇನೆ. ಇದರ ಬಗ್ಗೆ ಯಾವ ಸಂದೇಹವನ್ನು ಪಡಬೇಕಾಗಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನೀವು ನ್ಯಾಷನಲ್ ಹೈವೇ ನ್ಕೀಮುಗಳಿಗೆ ಒಪ್ಪಿಕೊಂಡಿರುವುದರಿಂದ ಅದಕ್ಕೆನುಸಾರವಾಗಿ ಎಲ್ಲವನ್ನು ಒಪ್ಪಿಕೊಳ್ಳಲೇಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ.—ಬಹುದೀರ್ಘ ಕಾಲ ಈ ಡ್ರಾಫ್ಟ್ ಬಿಲ್ಲನ್ನು ನಾಲ್ಕು ವರ್ಷಗಳಿಂದಲೂ ಒಬ್ಬರ ಮೇಲೊಬ್ಬರು ಮೂರು ಜನ ಪಿ.ಡಬ್ಲ್ಯು.ಡಿ. ಸೆಕ್ರೆಟರಿಗಳು, ಅನೇಕ ಅಧಿಕಾರಿಗಳು, ತಜ್ಞರು, ಚೀಫ್ ಇಂಜನಿಯರುಗಳು ಪರಿಶೀಲನೆ ಮಾಡಿದ ಮೇರೆ ಸರ್ಕಾರದವರು ಕ್ಯಾಬಿನೆಟ್ಟಿನಲ್ಲಿ ಡಿಸಿಷ್ಟ ತೆಗೆದುಕೊಂಡು ಈಗ ಈ ನಭೆಯ ಒಪ್ಪಿಗೆ ತೆಗೆದು ಕೊಳ್ಳಬೇಕೆಂದೇ ತಮ್ಮ ಮುಂದಿಟ್ಟಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಹಾಗಿದ್ದರೆ ಏಕೆ ಇಷ್ಟು ವಿಧಾನವಾಯಿತು? ಇದೇನಾದರೂ ನಿಮಗೆ ಸರಿಯಿಲ್ಲವೆಂದು ಕಂಡಿತೋ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದಕ್ಕೆ ಬೇರೆಬೇರೆ ಕಾರಣಗಳಾಗಿರಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಂಗಳೂರಿನಿಂದ ಚಿತ್ರದುರ್ಗಕ್ಕೆ ಹೋಗುವ ನ್ಯಾಷನಲ್ ಹೈವೇನನ್ನು ವೈಡನ್ ಮಾಡಿದ್ದಕ್ಕೆ ಅಲ್ಲಿನ ರೈತರಿಗೇನಾದರೂ ಕಾಂಪನ್‌ಸೇಷನ್ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೀರಾ?

ಶ್ರೀ ಎಚ್. ಕೆ. ವೀರಣ್ಣಗಾಡ.—ಕಾಂಪನ್‌ಸೇಷನ್‌ಗೇ ಎಕ್ಸ್‌ಪೈರಿ ಮಾಡುತ್ತಿದ್ದಾರೆ. ಡೆಪ್ಯುಟಿ ಕಮಿಷನರ್ ಡಿಕ್ಲೇರ್ ಮಾಡಿ ಎಷ್ಟು ಕಾನೂನು ಬಧ್ಧವಾಗಿ ಕೊಡಬಹುದು ಎಂದು ಹೇಳುತ್ತಾರೋ ಅಷ್ಟು ಕಾಂಪನ್‌ಸೇಷನ್ ಕೊಡಬೇಕಾಗುತ್ತದೆ.

ಶ್ರೀ ಕೆ. ಪುಟ್ಟಸ್ವಾಮಿ.—ನುಮ್ಮನೆ ಇರಬಾರದೆಂದು ಹೇಳದೇ ಕೇಳದೆ ಜಮೀನನ್ನು ತಗೆದು ಕೊಂಡರೆ ಜನ ಸಾಮಾನ್ಯರು ನುಮ್ಮನಿರುತ್ತಾರೆಯೇ?

ಶ್ರೀ ಹೆಚ್. ಕೆ. ವೀರಣ್ಣಗಾಡ. —ದೊಡ್ಡದಾಗಿರುವ ಒಂದು ಗದ್ದೆಯನ್ನು ವಾವು ರಸ್ತೆಗಾಗಿ ತಗೆದುಕೊಂಡಿದ್ದರೆ, ಅವರಿಗೆ ಸಾಕಷ್ಟು ಪ್ರತಿಫಲವನ್ನು ಕೊಡಲೇ ಬೇಕಾಗುತ್ತದೆ. ಅವರಿಗೆ ಪರಿಹಾರವನ್ನು ಕೊಡದೇ ಇರಬೇಕು ಎನ್ನುವುದು ನರಕಾರದ ಇಚ್ಛೆಯಾಗಿಲ್ಲ. ಇದರಲ್ಲಿ ಒಂದು ವಿಚಾರವನ್ನು ಗಮನಕ್ಕೆ ತಗೆದುಕೊಳ್ಳಬೇಕು. ರಸ್ತೆಯ ಮಧ್ಯದಿಂದ ಈಚೆಗೆ 75 ಅಡಿಗಳು, ಆಚೆಗೆ 75 ಅಡಿಗಳು ಇರುವಂತೆ ಬೇಕಾಗುವ ಜಾಗವನ್ನು ಅಕ್ವೈರು ಮಾಡಬೇಕಾದರೆ ಅವರಿಗೆ ಕಾಂಪೆನ್‌ಸೇಷನ್ನು ಕೊಡಬೇಕಾಗುತ್ತದೆ. ಕಾನೂನಿನ ಪ್ರಕಾರ ನಾಲ್ಕು ಗುಂಟೆಗಿಂತ ಹೆಚ್ಚಾಗಿದ್ದರೆ ಕಾಂಪೆನ್‌ಸೇಷನ್ನು ಕೊಡುತ್ತಾರೆ. ಇದರೊಳಗೆ ಇದ್ದರೆ ಇಲ್ಲ, ಅಷ್ಟೇ.

Mr. DEPUTY SPEAKER.—The question is:

"That whereas it is desirable that control and restriction of ribbon development in respect of National Highways, payment of compensation to persons sustaining damage in consequence of such control and regulation, levy of betterment charges on lands benefiting from the improvement of National Highways and all other consequential and incidental matters, in so far as these matters are matters with respect to which Parliament has no power to make laws for the States, should be regulated by Parliament by law;

Now, therefore, in pursuance of Clause (1) of Article 252 of the Constitution of India, this Assembly hereby resolves that the matters aforesaid shall be regulated in the State of Mysore by Parliament by law."

The resolution was adopted.

Mr. DEPUTY SPEAKER—The House will now rise and meet again at 9 A.M. to-morrow.

The House adjourned at Twenty Minutes past Five of the Clock to meet again at Nine of the Clock on Saturday, the 25th November 1961.